ಒಟ್ಟು ಪ್ರಶ್ನೆಗಳ ಸಂಖ್ಯೆ : 26 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
Total No. of Questions : 26 ] [ Total No. of Printed Pages : 8

**ಸಂಕೇತ ಸಂಖ್ಯೆ : 102-EK (NS)**
**Code No. : 102-EK (NS)**

**ಶಿಕ್ಷಣ**
**EDUCATION**

# ಮೂಲ ಪರಿಕಲ್ಪನೆಗಳ ಪರಿಚಯ
# INTRODUCTION TO BASIC CONCEPTS

(ಕನ್ನಡ ಮತ್ತು ಇಂಗ್ಲಿಷ್ ಭಾಷಾಂತರ)
( Kannada & English Versions )
**(ಹೊಸ ಪಠ್ಯವಸ್ತು)**
**(New Syllabus)**

ದಿನಾಂಕ : 06. 06. 2017 ]
Date : 06. 06. 2017 ]
ಸಮಯ : ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ರವರೆಗೆ ] [ ಗರಿಷ್ಠ ಅಂಕಗಳು : 60
Time : 10.00 A.M. to 1.00 P.M. ] [ Max. Marks : 60

*ಅಭ್ಯರ್ಥಿಯ ನೋಂದಣಿ ಸಂಖ್ಯೆ*
*Register Number of the Candidate*

(ಕನ್ನಡ ಭಾಷಾಂತರ)
(Kannada Version)

**ಭಾಗ – I**

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸೂಕ್ತವಾದ ಒಂದು ಆಯ್ಕೆಯನ್ನು ಆರಿಸಿ ಬರೆಯಿರಿ. ಪ್ರತಿ ಪ್ರಶ್ನೆಗೆ ಒಂದು ಅಂಕ ನೀಡಲಾಗಿದೆ. ಪ್ರತಿ ಪ್ರಶ್ನೆಯೂ ಕಡ್ಡಾಯ : 10 × 1 = 10

1. ಬೋಧನಾಶಾಸ್ತ್ರ ಎಂದರೆ
   (A) ಪಾಠಬೋಧನೆಯಲ್ಲಿ ಹೊಂದಿರಬಹುದಾದ ಆಳವಾದ ಪಾಂಡಿತ್ಯ
   (B) ವಯಸ್ಕರ ಬೋಧನೆಯ ಕಲೆ ಮತ್ತು ವಿಜ್ಞಾನ
   (C) ಮಕ್ಕಳ ಬೋಧನೆಯಲ್ಲಿರುವ ಕಲೆ ಮತ್ತು ವಿಜ್ಞಾನ
   (D) ಬೋಧನಾ ವಿಧಾನ ಮತ್ತು ತಂತ್ರಗಳು

2. ಶಿಕ್ಷಣದ ಗುರಿ ಕುರಿತಂತೆ ರಾಷ್ಟ್ರೀಯ ಕೇಂದ್ರೀಕೃತ ಗುಂಪಿನ ಯಥಾಸ್ಥಿತಿ ಪತ್ರಿಕೆಯ ( NFGPP ) ಶಿಫಾರಸ್ಸು ಇದಾಗಿದೆ. ಶಾಲಾ ಜೀವನವು
   (A) ಮಕ್ಕಳ ಕುಟುಂಬದ ಅನುಭವಗಳೊಂದಿಗೆ ಹೊಂದಿಸುವ ಕೊಂಡಿಯಂತಿರಬೇಕು
   (B) ಸಮುದಾಯದ ಅನುಭವಗಳೊಂದಿಗೆ ಹೊಂದಿಸುವ ಕೊಂಡಿಯಂತಿರಬೇಕು
   (C) ಮಕ್ಕಳ ಮತ್ತು ಸಮುದಾಯದ ಅನುಭವಗಳಿಗೆ ತಡೆಗೋಡೆಯಾಗಿರಬೇಕು
   (D) ಮಕ್ಕಳ ಕುಟುಂಬ ಮತ್ತು ಸಮುದಾಯದ ಅನುಭವಗಳೊಂದಿಗೆ ಹೊಂದಿಸುವ ಕೊಂಡಿಯಂತಿರಬೇಕು

3. ಧನಾತ್ಮಕ ಅನನ್ಯತೆಯು ಈ ಕೆಳಗಿನ ಮನೋಸಾಮಾಜಿಕ ಅಂಶಗಳನ್ನು ಒಳಗೊಂಡಿದೆ
   (A) ಸ್ವಯಂ ಪರಿಕಲ್ಪನೆ　　(B) ಸ್ವಪ್ರತಿಷ್ಠೆ
   (C) ಸ್ವ-ನಂಬಿಕೆ　　(D) ಇವುಗಳೆಲ್ಲವೂ
4. ವ್ಯಕ್ತಿಯ ಜೀವಮಾನದ ಈ ಹಂತವನ್ನು 'ವಯಸ್ಕರ ಹೊಸ್ತಿಲು' ಎಂಬುದಾಗಿ ಕರೆಯಲಾಗಿದೆ.
   (A) ಶೈಶಾವಸ್ಥೆ　　(B) ಬಾಲ್ಯಾವಸ್ಥೆ
   (C) ತಾರುಣ್ಯಾವಸ್ಥೆ　　(D) ವೃದ್ಧಾಪ್ಯ
5. 'ಕುಶಲ್' ಎಂಬ ವಿದ್ಯಾರ್ಥಿಯು ತರಗತಿಯಲ್ಲಿ ಕಲಿಕಾ ಚಟುವಟಿಕೆಗಳು, ಪ್ರಯೋಗಗಳು, ಮಾದರಿಗಳು ಮುಂತಾದವುಗಳನ್ನು ಬಳಸಿ ಹೆಚ್ಚಿನ ಕಲಿಕಾ ಪ್ರಗತಿ ಸಾಧಿಸಿದ್ದಾನೆ. ಹಾಗಾದರೆ ಇವನು ಈ ಬಗೆಯ ಕಲಿಕಾರ್ಥಿ
   (A) ವೀಕ್ಷಣಾ ಕಲಿಕಾರ್ಥಿ　　(B) ಸ್ಪರ್ಶದ ಕಲಿಕಾರ್ಥಿ
   (C) ಆಲಿಸುವಿಕೆಯ ಕಲಿಕಾರ್ಥಿ　　(D) ಓದು ಮತ್ತು ಬರಹದ ಕಲಿಕಾರ್ಥಿ
6. ಶಾಲೆಯಲ್ಲಿ ವೈವಿಧ್ಯತೆ ಹಾಗೂ ಒಳಗೊಳ್ಳುವ ಶಿಕ್ಷಣ ಕುರಿತು ( NCF 2005 ) ಪಠ್ಯಕ್ರಮದ ಆಶಯದಂತೆ, ಅಭಿವೃದ್ಧಿ ಮತ್ತು ಸುಧಾರಣೆಯು
   (A) ಪ್ರತಿಭಾವಂತ ಮಕ್ಕಳಿಗೆ ವಿಶೇಷ ಶಿಕ್ಷಣ ನೀಡುವಂತಿರಬೇಕು
   (B) ಗ್ರಾಮೀಣ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಬೇಕು
   (C) ಎಲ್ಲಾ ಮಕ್ಕಳಿಗೆ ಅರ್ಥಪೂರ್ಣ ಅನುಭವಗಳನ್ನು ಒದಗಿಸಿ, ಪಠ್ಯಪುಸ್ತಕ ಸಂಸ್ಕೃತಿಯಿಂದ ದೂರ ಸರಿಯುವ ಪ್ರಯತ್ನ ಮಾಡಬೇಕು
   (D) ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿ ನಡೆಸುವುದು
7. ಪ್ರಾಥಮಿಕ ಶಾಲೆಗಳಲ್ಲಿ 'ಪಡೇ ಭಾರತ್ ಬಡೇ ಭಾರತ್' ಕಾರ್ಯಕ್ರಮದ ಅನುಷ್ಠಾನದ ಪ್ರಮುಖ ಉದ್ದೇಶ
   (A) 1 ರಿಂದ 3ನೇ ತರಗತಿಯ ಎಲ್ಲಾ ಮಕ್ಕಳಿಗೆ ತಮ್ಮ ತಮ್ಮ ಮಾತೃಭಾಷೆಯಲ್ಲಿ ಸರಾಗವಾಗಿ ಓದುವ ಕೌಶಲ ಬೆಳೆಸುವುದು
   (B) 1 ರಿಂದ 3ನೇ ತರಗತಿಯ ಎಲ್ಲಾ ಮಕ್ಕಳಿಗೆ ತಮ್ಮ ತಮ್ಮ ಮಾತೃಭಾಷೆಯಲ್ಲಿ ತಪ್ಪಿಲ್ಲದಂತೆ ಬರೆಯುವ ಕೌಶಲ ಬೆಳೆಸುವುದು
   (C) 1 ರಿಂದ 3ನೇ ತರಗತಿಯ ಎಲ್ಲಾ ಮಕ್ಕಳಿಗೆ ಗಣಿತದಲ್ಲಿ ಮೂಲ ಪರಿಕಲ್ಪನೆಗಳನ್ನು ಸರಳ ಲೆಕ್ಕಾಚಾರವನ್ನು ಗಟ್ಟಿಗೊಳಿಸುವುದು
   (D) ಇವುಗಳೆಲ್ಲವೂ
8. 'ಸರ್ವ ಶಿಕ್ಷಣ ಅಭಿಯಾನ' ಯೋಜನೆ ಅನುಷ್ಠಾನಗೊಂಡ ವರ್ಷ
   (A) 2000 - 2001　　(B) 2001 - 2002
   (C) 2010 - 2011　　(D) 2014 - 2015
9. RTE – 2009 ರ ಅಧಿನಿಯಮದ ಪ್ರಕಾರ ಖಾಸಗೀ ಶಾಲೆಗಳಲ್ಲಿ ಮಕ್ಕಳ ದಾಖಲಾತಿಗೆ ನಿಗದಿಪಡಿಸಿರುವ ಮೀಸಲಾತಿ ಪ್ರಮಾಣ
   (A) ಶೇ. 10 ರಷ್ಟು　　(B) ಶೇ. 25 ರಷ್ಟು
   (C) ಶೇ. 30 ರಷ್ಟು　　(D) ಶೇ. 50 ರಷ್ಟು
10. ಸಂವಿಧಾನದ 350 (A) ಅನುಚ್ಛೇದದಲ್ಲಿ ಪ್ರಸ್ತಾಪಿಸಿರುವ ಅಂಶ ಇದಾಗಿದೆ
   (A) ಭಾಷಾ ಅಲ್ಪಸಂಖ್ಯಾತರಿಗೆ ಮಾತೃಭಾಷಾ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣದ ಸೌಲಭ್ಯ ಒದಗಿಸುವುದು
   (B) ಸರ್ಕಾರದ ಧನಸಹಾಯ ಪಡೆಯುತ್ತಿರುವ ಯಾವುದೇ ಶಿಕ್ಷಣ ಸಂಸ್ಥೆಯು ಯಾವುದೇ ಧಾರ್ಮಿಕ ಬೋಧನೆಗಳನ್ನು ನೀಡುವಂತಿಲ್ಲ
   (C) ಎಲ್ಲಾ ಮಕ್ಕಳಿಗೂ ಅವರು 14 ವರ್ಷ ಪೂರೈಸುವವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವುದು
   (D) ಭಾರತದ ಸಾರ್ವಭೌಮತ್ವ, ಐಕ್ಯತೆ ಹಾಗೂ ಅಖಂಡತೆಗಳನ್ನು ಸಮರ್ಥಿಸುವುದು ಮತ್ತು ಸಂರಕ್ಷಿಸುವುದು

## ಭಾಗ – II

ಈ ಕೆಳಗಿನವುಗಳಲ್ಲಿ ಯಾವುದಾದರೂ **ಐದು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. ಪ್ರತಿಯೊಂದು ಉತ್ತರವು ಅರ್ಧ ಪುಟಕ್ಕೆ ಮೀರದಿರಲಿ : $5 \times 2 = 10$

11. "ಶೈಕ್ಷಣಿಕ ಸಮಾಜಶಾಸ್ತ್ರವು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ತಮ್ಮ ಪಾತ್ರವನ್ನು ನಿರ್ವಹಿಸುವಲ್ಲಿ ಸಶಕ್ತರನ್ನಾಗಿಸುತ್ತದೆ" ಎಂಬುದನ್ನು ನಿಮ್ಮ ತರಗತಿ ಅನುಭವದೊಂದಿಗೆ ಅನ್ವಯಿಸಿ ಬರೆಯಿರಿ.
12. ವಿಕಸನ ಸಮೀಪ ವಲಯ ( ZPD ) ವನ್ನು ಒಂದು ಉದಾಹರಣೆಯೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.
13. ಕಲಿಕೆಯ ಯಾವುದಾದರೂ ನಾಲ್ಕು ಗುಣಲಕ್ಷಣಗಳನ್ನು ಪಟ್ಟಿ ಮಾಡಿ.
14. ಒಳಗೊಳ್ಳುವಿಕೆಗಿರುವ ಅಡೆ–ತಡೆಗಳಿಂದ ಹೊರಬರಲು ವಿದ್ಯಾರ್ಥಿ–ಶಿಕ್ಷಕರಾಗಿ ನೀವು ಸೂಚಿಸುವ ಯಾವುದಾದರೂ ನಾಲ್ಕು ಮಾರ್ಗೋಪಾಯಗಳನ್ನು ತಿಳಿಸಿ.
15. ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ( DPEP ) ಕಾರ್ಯಕ್ರಮದಲ್ಲಿದ್ದ ಯಾವುದಾದರೂ ಎರಡು ಮುಖ್ಯ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
16. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಯಾವುದಾದರೂ ಎರಡು ಪ್ರಮುಖ ಗುರಿಗಳನ್ನು ಪಟ್ಟಿ ಮಾಡಿ.
17. ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ವಿಧಾನ ಹಾಗೂ ಒಳಗೊಳ್ಳುವ ವಿಧಾನಗಳಿಗಿರುವ ನಾಲ್ಕು ವ್ಯತ್ಯಾಸಗಳನ್ನು ತಿಳಿಸಿ.
18. ಒಂದು ತರಗತಿಯಲ್ಲಿ ವಿವಿಧ ರೀತಿಯ ಕಲಿಕಾಗತಿಯನ್ನು ಹೊಂದಿರುವ ವಿದ್ಯಾರ್ಥಿಗಳನ್ನು ನಿಭಾಯಿಸುವಲ್ಲಿ ನೀವು ಸೂಚಿಸುವ ಮಾರ್ಗೋಪಾಯಗಳೇನು ?

## ಭಾಗ – III

ಈ ಕೆಳಗಿನ ಪ್ರತಿ ಪ್ರಶ್ನೆಗೂ ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದಕ್ಕೆ ಉತ್ತರಿಸಿ. ಪ್ರತಿ ಉತರವು ಒಂದು ಪುಟ ಮೀರದಂತಿರಲಿ. ಪ್ರತಿಯೊಂದು ಪ್ರಶ್ನೆಗೆ ಐದು ಅಂಕಗಳು : $8 \times 5 = 40$

19. ವೃತ್ತಿಪರ ಶಿಕ್ಷಕರಾಗಲು ನೀವುಗಳು ಅಳವಡಿಸಿಕೊಳ್ಳಬಹುದಾದ ಯಾವುದಾದರೂ ಐದು ಅಂಶಗಳನ್ನು ನಿಮ್ಮ ರೂಢಿಪಾಠ ಬೋಧನೆಯ ಅನುಭವಗಳೊಂದಿಗೆ ಸ್ಪಷ್ಟೀಕರಿಸಿ.

***ಅಥವಾ***

"ಪಠ್ಯಕ್ರಮ ಮತ್ತು ಪಠ್ಯವಸ್ತು ಎರಡೂ ಒಂದೇ ಅಲ್ಲ, ಆದರೆ ಅವುಗಳು ಒಂದಕ್ಕೊಂದು ಪೂರಕವಾಗಿವೆ." ಈ ಹೇಳಿಕೆಯನ್ನು ನಿಮ್ಮ ವಿದ್ಯಾರ್ಥಿ–ಶಿಕ್ಷಕ ತರಬೇತಿ ಅನುಭವದಲ್ಲಿ ಹೇಗೆ ಸಮರ್ಥಿಸುವಿರಿ ?

20. ಮಗುವನ್ನು ಸಾಮಾಜೀಕರಣಗೊಳಿಸುವಲ್ಲಿ ಕುಟುಂಬ, ಸಮವಯಸ್ಕರ ಸಮೂಹ, ಶಾಲೆ, ಸಂಸ್ಕೃತಿ ಹಾಗೂ ಸಮುದಾಯದ ಪಾತ್ರವನ್ನು ಸಂಕ್ಷಿಪ್ತವಾಗಿ ವಿವರಿಸಿ.

***ಅಥವಾ***

ಶೈಕ್ಷಣಿಕ ಸಮಾಜಶಾಸ್ತ್ರದ ವ್ಯಾಪ್ತಿಯಲ್ಲಿ ಬರುವ ಯಾವುದಾದರೂ ಐದು ಅಂಶಗಳನ್ನು ವಿವರಿಸಿ.

21. "ಪ್ರಸ್ತುತ ದಿನಗಳಲ್ಲಿ ಮಕ್ಕಳನ್ನು ಸಾಮಾಜೀಕರಣಗೊಳಿಸುವಲ್ಲಿ ಸಮೂಹ ಮಾಧ್ಯಮಗಳು ಅತ್ಯಂತ ಹೆಚ್ಚು ಪ್ರಭಾವಶಾಲಿಯಾಗಿವೆ" ಈ ಹೇಳಿಕೆಯನ್ನು ವಿಶ್ಲೇಷಿಸಿ.

***ಅಥವಾ***

"ಕಲಿಕೆ ಮೂಲಭೂತವಾಗಿ ಸಾಮಾಜಿಕ ಪ್ರಕ್ರಿಯೆಯಾಗಿದೆ" ಎಂಬುದನ್ನು ಪ್ರಮಾಣೀಕರಿಸಿ.

22. ಒಂದೇ ಅವಧಿಯಲ್ಲಿ ಒಬ್ಬರೇ ಶಿಕ್ಷಕರು ಒಂದಕ್ಕಿಂತ ಹೆಚ್ಚು ತರಗತಿಗಳನ್ನು ಅತಿ ಪರಿಣಾಮಕಾರಿ ಬೋಧನಾ–ಕಲಿಕೆ ಪ್ರಕ್ರಿಯೆಯೊಂದಿಗೆ ನಿಭಾಯಿಸುತ್ತಾರೆ. ಈ ಸಂದರ್ಭದಲ್ಲಿ ಅವರುಗಳು ಬಳಸಬಹುದಾದ ಯಾವುದಾದರೂ ಐದು ತಂತ್ರಗಳನ್ನು ಕಲಿಕೆ ಪ್ರಕ್ರಿಯೆಯೊಂದಿಗೆ ಮೌಲ್ಯೀಕರಿಸಿ.

***ಅಥವಾ***

"ಕಲಿಕೆಯನ್ನು ಅನುಕೂಲಿಸುವಲ್ಲಿ ಸಹಪಾಠಿ ಕಲಿಕೆಯು ಶಿಕ್ಷಕ–ಕೇಂದ್ರಿತ ಕಲಿಕೆಗಿಂತ ಹೆಚ್ಚು ಪರಿಣಾಮಕಾರಿಯಾಗಿರುವುದರಿಂದ ಬಹುವರ್ಗ ಬೋಧನೆ ವಿಧಾನವು ಹೆಚ್ಚು ಮಹತ್ವವನ್ನು ಹೊಂದಿದೆ" ಎಂಬುದನ್ನು ಪ್ರಮಾಣೀಕರಿಸಿ.

23. ಉತ್ತರ ಬಾಲ್ಯಾವಸ್ಥೆಯಲ್ಲಿ ಕಂಡುಬರುವ ಸಹಜ ಗುಣಲಕ್ಷಣಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

***ಅಥವಾ***

ಸಂರಚನಾ ಬೋಧನಾ–ಕಲಿಕಾ ಪ್ರಕ್ರಿಯೆಯ 5E ಗಳನ್ನು ಒಂದು ಉದಾಹರಣೆಯೊಂದಿಗೆ ಸಂಕ್ಷಿಪ್ತವಾಗಿ ವಿವರಿಸಿ.

24. ಜಾನ್‌ಸನ್‌ರವರ ಪ್ರಕಾರ ಸಂರಚನಾವಾದವನ್ನು ನಿಮ್ಮ ತರಗತಿ ಸನ್ನಿವೇಶದಲ್ಲಿನ ಬೋಧನೆ–ಕಲಿಕಾ ಪರಿಸರಕ್ಕೆ ಹೇಗೆ ಅಳವಡಿಸಿಕೊಳ್ಳಬಲ್ಲಿರಿ ಎಂಬುದನ್ನು ಸಮರ್ಥಿಸಿ.

***ಅಥವಾ***

ಮಗುವಿನ ಸರ್ವಾಂಗೀಣ ವಿಕಾಸ ಶಿಕ್ಷಣದ ಮೂಲ ಧ್ಯೇಯವಾಗಿದೆ. ಶಾಲಾ ಶಿಕ್ಷಕರಾಗಿ ಆಟಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ, ಅನುಸರಿಸಬಹುದಾದ ಅಂಶಗಳನ್ನು ವಿಷದೀಕರಿಸಿ.

25. ನಿಮ್ಮ ಬೋಧನಾ ಅನುಭವದಲ್ಲಿ ನಿಮ್ಮ ತರಗತಿಯಲ್ಲಿ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಲು. ಬಳಸಬಹುದಾದ ನಿಮ್ಮ ಆಯ್ಕೆಯ ಯಾವುದಾದರೂ ಐದು ಮಾನದಂಡಗಳನ್ನು ವಿಶ್ಲೇಷಿಸಿ.

***ಅಥವಾ***

ಮಕ್ಕಳ ಒಳಗೊಳ್ಳುವಿಕೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳ ಸಮಸ್ಯೆಗಳನ್ನು ಕುರಿತು ರಾಷ್ಟ್ರೀಯ ಫೋಕಸ್ ಪೊಸಿಷನ್ ಪೇಪರ್ ಶಿಕ್ಷಕರಿಗೆ ನೀಡಿರುವ ಶಿಫಾರಸ್ಸುಗಳನ್ನು ನಿಮ್ಮ ತರಬೇತಿ ಅನುಭವದೊಂದಿಗೆ ವಿಶ್ಲೇಷಿಸಿ ಬರೆಯಿರಿ.

26. ಶ್ರೀ ಲಕ್ಷ್ಮೀ ಒಬ್ಬ ಪ್ರತಿಭಾವಂತ ವಿದ್ಯಾರ್ಥಿನಿ. ತರಗತಿಯಲ್ಲಿನ ಸಾಮಾನ್ಯ ಕಲಿಕಾ ಪ್ರಕ್ರಿಯೆಗಳು ಇವಳಿಗೆ ನೀರಸದಾಯಕವಾಗಿವೆ. ಇವಳ ಕಲಿಕೆ ವೇಗವನ್ನು ವೃದ್ಧಿಸಲು ಯಾವುದಾದರೂ ಐದು ಚಟುವಟಿಕೆಗಳಿಂದ ಅವಳಿಗೆ ಒಳಗೊಳ್ಳುವ ಮತ್ತು ಮಗು ಸ್ನೇಹಿ ಶೈಕ್ಷಣಿಕ ಪರಿಸರವನ್ನು ಸೃಷ್ಟಿಸಿ.

***ಅಥವಾ***

ವೈವಿಧ್ಯತೆಯನ್ನು ಒಂದು ತರಗತಿಯ ಸಮಸ್ಯೆ ಎಂಬುದರ ಬದಲಾಗಿ, ಒಂದು ಸಂಪನ್ಮೂಲವಾಗಿ ಪರಿಗಣಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಿಮ್ಮ ತರಗತಿಯನ್ನು ಒಂದು ವೈವಿಧ್ಯತೆಯ ಸಂಪನ್ಮೂಲವಾಗಿ ಹೇಗೆ ಸೃಷ್ಟಿಸಬಲ್ಲಿರಿ.